ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ದಿನಾಂಕ : DATE : 19/9/2020

### ನಾಲ್ಕು ಬಾರಿ ಕಲಾಪ ಮುಂದೂಡಿಕೆ । ಕೊನೆಗೂ ಹೇಳಿಕೆಗೆ ವಿಷಾದ ವ್ಯಕ್ತಪಡಿಸಿದ ಸಚಿವ ಠಾಕೂರ್

# ಲೋಕಸಭೆಯಲ್ಲಿ ಪ್ರಧಾನಿ ನಿಧಿ ನಿಗಿನಿಗಿ

**ಹೊಸದಿಲ್ಲಿ:** ಕೊರೊನಾ ಆತಂಕದ ನಡುವೆ ಆರಂಭವಾಗಿರುವ ಸಂಸತ್ ಅಧಿವೇಶನದಲ್ಲಿ ಲೋಕಸಭೆ ಕಲಾಪವು ಶುಕ್ರವಾರ ನಾಲ್ಕು ಸಲ ಮುಂದೂಡಿಕೆ ಕಂಡಿತು.

ಮಧ್ಯಾಹ್ನ 3 ಗಂಟೆಗೆ ಸದನ ಸೇರುತ್ತಿದ್ದಂತೆಯೇ ಪಿಎಂ ಕೇರ್ಸ್ ನಿಧಿ ಕುರಿತು ಮಾತನಾಡುವ ಸಂದರ್ಭದಲ್ಲಿ ಹಣಕಾಸು ಖಾತೆ ಸಹಾಯಕ ಸಚಿವ ಅನುರಾಗ್ ಠಾಕೂರ್ ಅವರು ಗಾಂಧಿ ಕುಟುಂಬದ ಕುರಿತು ಉಲ್ಲೇಖ ಮಾಡಿದ್ದೇ ಗದ್ದಲ, ಕಲಾಪ




ಮುಂದೂಡಿಕೆಗೆ ಕಾರಣವಾಯಿತು. ಠಾಕೂರ್ ಕ್ಷಮೆ ಕೋರಲೇಬೇಕೆಂದು ಕಾಂಗ್ರೆಸ್ ಸದಸ್ಯರು ಪಟ್ಟು ಹಿಡಿದರು. ಅಂತಿಮವಾಗಿ, ''ನನ್ನ ಹೇಳಿಕೆಯಿಂದ ಯಾರಿಗಾದರೂ ನೋವಾಗಿದ್ದರೆ ವಿಷಾದಿಸುವೆ,'' ಎಂದು ಠಾಕೂರ್ ಹೇಳಿಕೆ ನೀಡಿದ ಬಳಿಕ ಪ್ರಕರಣ ಅಂತ್ಯ ಕಂಡಿತು.



ಸಚಿವ ಅನುರಾಗ್ ಠಾಕೂರ್ ಕ್ಷಮೆಗೆ ಆಗ್ರಹಿಸಿ ಕಾಂಗ್ರೆಸ್ ಸದಸ್ಯರು ಲೋಕಸಭೆಯಲ್ಲಿ ಶುಕ್ರವಾರ ಧರಣಿ ನಡೆಸಿದರು.

''ಪಿಎಂ ಕೇರ್ಸ್ ನಿಧಿ ವಿಚಾರದಲ್ಲಿ ಕೆಲವರು ಕೋರ್ಟ್‌ಗೆ ಹೋದರು. ಹೈಕೋರ್ಟ್‌ಗಳಿಂದ ಹಿಡಿದು ಸುಪ್ರೀಂ ಕೋರ್ಟ್ ವರೆಗೆ ಎಲ್ಲ ನ್ಯಾಯಾಲಯಗಳು ಸರಕಾರದ ಕ್ರಮವನ್ನು ಎತ್ತಿ ಹಿಡಿದಿವೆ. ಮಕ್ಕಳು ತಮ್ಮ ಪಿಗ್ಗಿ ಬ್ಯಾಂಕ್‌ಗಳಿಂದ ಹಣ ತೆಗೆದು ಈ ನಿಧಿಗೆ ಕೊಟ್ಟಿದ್ದಾರೆ. ಅದೇ ಪ್ರಧಾನಿಯವರ ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿಯನ್ನು ನೋಡಿ, 1948ರಲ್ಲಿ ಅಂದಿನ ಪ್ರಧಾನಿ ಜವಾಹರ್‌ಲಾಲ್ ನೆಹರು ನಿಧಿಯನ್ನು ಆರಂಭಿಸಿದರು. ಅಂದಿನಿಂದ ಇಂದಿನವರೆಗೂ ಈ ನಿಧಿಯ ನೋಂದಣಿ ಆಗಲಿಲ್ಲ. ನೀವು (ಕಾಂಗ್ರೆಸ್‌ನವರು) ರಾಜೀವ್ ಗಾಂಧಿ, ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಅವರಿಗಾಗಿ ಟ್ರಸ್ಟ್ ಆರಂಭಿಸಿದಿರಿ. ಈ ಟ್ರಸ್ಟ್ ಸಹ ನೋಂದಣಿಯಾಗಲಿಲ್ಲ. ಪಿಎಂ ಕೇರ್ಸ್ ನಿಧಿ ನೋಂದಾಯಿತ ಟ್ರಸ್ಟ್ ಆಗಿದೆ,'' ಎನ್ನುವ ಮೂಲಕ ಠಾಕೂರ್ ವಿವಾದದ ಕಿಡಿ ಎಬ್ಬಿಸಿದರು.

ಠಾಕೂರ್ ಅವರು ಗಾಂಧಿ ಕುಟುಂಬದ ಹೆಸರು ಪ್ರಸ್ತಾಪಿಸಿದ್ದು ಕಾಂಗ್ರೆಸ್ ಸದಸ್ಯರನ್ನು ಕೆರಳಿಸಿತು. ಕ್ಷಮೆಗೆ ಆಗ್ರಹಿಸಿ ಧರಣಿ ನಡೆಸಲು ಮುಂದಾದರು. ಕೊರೊನಾ ಸುರಕ್ಷತಾ ಕ್ರಮಗಳನ್ನು ಕಡೆಗಣಿಸಿದರೆ ಮುಲಾಜಿಲ್ಲದೆ ಹೊರಹಾಕುವುದಾಗಿ ಸ್ಪೀಕರ್ ಓಂ ಬಿರ್ಲಾ ಎಚ್ಚರಿಕೆ ನೀಡಿದರೂ ಮಣಿಯಲಿಲ್ಲ. ಉತ್ತರ ನೀಡುವ ಭರದಲ್ಲಿ ಕಾಂಗ್ರೆಸ್ ನಾಯಕ ಅಧೀರ್‌ರಂಜನ್ ಚೌಧರಿ ಅವರು ಅನುರಾಗ್ ಠಾಕೂರ್ ಅವರನ್ನು 'ಚೋಕ್ರಾ' (ಬಾಲಕ) ಎಂದು ಕರೆದದ್ದೂ ಆಯಿತು. ಈ ನಡುವೆ ತೃಣಮೂಲ ಕಾಂಗ್ರೆಸ್‌ನ ಕಲ್ಯಾಣ್ ಬ್ಯಾನರ್ಜಿ ಅವರು ಸ್ಪೀಕರ್ ಪಕ್ಷಪಾತ ತೋರುತ್ತಿದ್ದಾರೆ ಎಂದು ಆರೋಪಿಸಿದರು. ಪ್ರತಿಪಕ್ಷಗಳ ಗದ್ದಲ ಮುಂದುವರಿದ ಕಾರಣ ಸ್ಪೀಕರ್ ಕಲಾಪ ಮುಂದೂಡಿದರು. ಮೂರು ಸಲ ಸದನ ಸೇರಿದಾಗಲೂ ಇದೇ ಪುನರಾವರ್ತನೆಯಾಯಿತು. ನಾಲ್ಕು ಬಾರಿ ಮುಂದೂಡಿಕೆ ಕಂಡ ಬಳಿಕ ಸದನ ಸೇರಿದಾಗ ಠಾಕೂರ್ ವಿಷಾದ ವ್ಯಕ್ತಪಡಿಸಿದರು.

## ಅಶೋಕ್ ಗಸ್ತಿಗೆ ರಾಜ್ಯಸಭೆ ಗೌರವ

ಗುರುವಾರ ರಾತ್ರಿ ನಿಧನರಾದ ರಾಜ್ಯಸಭೆ ಸದಸ್ಯ ಅಶೋಕ್ ಗಸ್ತಿ ಹಾಗೂ ಮಾಜಿ ಸದಸ್ಯೆ ಕಪಿಲಾ ವಾತ್ಸ್ಯಾಯನ ಅವರಿಗೆ ರಾಜ್ಯಸಭೆಯಲ್ಲಿ ಶುಕ್ರವಾರ ಸಂತಾಪ ಸೂಚಿಸಲಾಯಿತು. ಬೆಳಗ್ಗೆ ಕಲಾಪ ಆರಂಭವಾಗುತ್ತಿದ್ದಂತೆಯೇ ಮೌನಾಚರಣೆ ಮೂಲಕ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಸಭಾಪತಿ ಎಂ.ವೆಂಕಯ್ಯ ನಾಯ್ಡು ಅವರು ಸಂತಾಪ ಸೂಚಿಸುವ ನಿರ್ಣಯ ಓದಿದರು. ಬಳಿಕ ಮೃತರ ಗೌರವಾರ್ಥ 30 ನಿಮಿಷ ಕಲಾಪ ಮುಂದೂಡಲಾಯಿತು. ಸದನದ ಹಾಲಿ ಸದಸ್ಯರು ನಿಧನರಾದರೆ ದಿನದ ಮಟ್ಟಿಗೆ ಕಲಾಪ ಮುಂದೂಡಿ ಗೌರವ ಸಲ್ಲಿಸುವುದು ವಾಡಿಕೆ. ಆದರೆ, ಕೊರೊನಾ ಸಂದರ್ಭದಲ್ಲಿ ಕಡಿಮೆ ಅವಧಿಯ ಅಧಿವೇಶನ ನಡೆಯುತ್ತಿರುವುದರಿಂದ ಅರ್ಧ ಗಂಟೆ ಕಾಲ ಕಲಾಪ ಮುಂದೂಡಲಾಯಿತು. ನಂತರ, ಕೊರೊನಾ ಕಾರಣದಿಂದ ಸಂಸದರ ವೇತನವನ್ನು ಶೇ.30ರಷ್ಟು ಕಡಿತ ಮಾಡುವ ವಿಧೇಯಕಕ್ಕೆ ರಾಜ್ಯಸಭೆ ಅನುಮೋದನೆ ನೀಡಿತು. ಈ ವಿಧೇಯಕಕ್ಕೆ ಲೋಕಸಭೆ ಈಗಾಗಲೇ ಅಂಗೀಕಾರ ನೀಡಿದೆ.